

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–09–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲ ಮತ್ತು ಆಗ ನಡೆದ ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಡಮಸ್ಕಸ್ ಮೇಲಿನ ಮುತ್ತಿಗೆ ಹಲವು ತಿಂಗಳ ತನಕ ಮುಂದುವರೆದಿತ್ತು. ಹಝ್ರತ್ ಅಬೂಬಕರ್(ರ)ರ ನಿಧನದ ನಂತರ ಮುಸ್ಲಿಮರಿಗೆ ಡಮಸ್ಕಸಿನ ಮೇಲೆ ವಿಜಯ ಲಭಿಸಿತು. ಆ ಘಟನೆ ಹಝ್ರತ್ ಅಬೂಬಕರ್(ರ)ರ ಕಾಲದ್ದಾಗಿದೆ. ಆದುದರಿಂದ ಅದರ ಬಗ್ಗೆಗಿನ ವಿವರಣೆಯನ್ನು ಅವರ ಪ್ರಸ್ತಾಪದಲ್ಲಿ ಮುಂದಿರಿಸಲಾಗುವುದು. ಈಗ ಡಮಸ್ಕಸಿನ ವಿಜಯದ ನಂತರ ಉಂಟಾದ ಘಟನೆಗಳ ಬಗ್ಗೆ ವಿವರಿಸುತ್ತೇನೆ.

ಡಮಸ್ಕಸಿನ ಮೇಲೆ ವಿಜಯ ಸಾಧಿಸಿದ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಹಝ್ರತ್ ಅಬೂಉಬೈದ(ರ) ಬಖಾಅ್‌ದ ಯುದ್ಧಕ್ಕಾಗಿ ಕಳುಹಿಸಿದರು. ಅಲ್ಲಿನ ವಿಜಯದ ನಂತರ ಮೀಸ್‌ನೂನ್ ಎಂಬ ಹೆಸರಿನ ಚಿಲುಮೆಯ ಕಡೆಗೆ ಹಝ್ರತ್ ಖಾಲಿದ್(ರ) ಒಂದು ಸಣ್ಣ ಸೈನ್ಯವನ್ನು ಕಳುಹಿಸಿದರು. ರೋಮನ್ನರ ಒಂದು ಸೈನಿಕ ಸಂಘವು ಮುಸ್ಲಿಮರ ಸೈನ್ಯದ ಹಿಂದಿನಿಂದ ಹಲ್ಲೆ ನಡೆಸಿತು. ಅದರ ಕಾರಣದಿಂದ ಅನೇಕ ಮುಸ್ಲಿಮರು ಶಹೀದ್ ಆದರು. ಆ ಹುತಾತ್ಮರ ಕಾರಣದಿಂದ ಆ ಚಿಲುಮೆಯ ಹೆಸರು **ಐನುಶ್ಶುಹದಾ** ಎಂದಾಯಿತು.

ಹಝ್ರತ್ ಅಬೂಉಬೈದ(ರ) ಡಮಸ್ಕಸಿನ ಮೇಲೆ ಯಝೀದ್ ಬಿನ್ ಅಬೂಸುಫ್‌ಯಾನ್‌ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಅವರು ಜೈದ್ ಬಿನ್ ಖಲೀಫರನ್ನು ತುದ್‌ಮರಿಗೆ ಕಳುಹಿಸಿದರು ಮತ್ತು ಅಬೂಝುಹರ್ ಖುಶೀರಿಯನ್ನು ಸನಿಯ ಮತ್ತು ಹೂರಾನಿಗೆ ರವಾನೆ ಮಾಡಿದರು. ಅಲ್ಲಿಯ ಜನರು ಸಂಧಾನ ಮಾಡಿಕೊಂಡರು. ಅವರ ಮೇಲೆ ಹೊರಿಸಲಾದ ಯುದ್ಧದ ಕಾರಣದಿಂದ ಶರ್‌ಹ್‌ಬೀಲ್ ಬಿನ್ ಹಸನ(ರ) ಜೋರ್ದಾನಿನ ರಾಜಧಾನಿ ತಬರಿಯನ್ನು ಬಿಟ್ಟು ಬಾಕಿ ಪೂರ್ತಿ ದೇಶವನ್ನು ವಶಪಡಿಸಿಕೊಂಡರು. ಅತ್ತ ಬಖಾಅ್‌ದ ಪ್ರದೇಶದಿಂದ ಹಝ್ರತ್ ಖಾಲಿದ್(ರ) ವಿಜಯಿಯಾಗಿ ಮರಳಿದರು.

ಫಹಲ್ ವಿಜಯ ಹಿಜರೀ 14ರಲ್ಲಿ ನಡೆಯಿತು. ಹಿರ್ಖಲ್ ಅರಸ ಹಿಮಸಿನಲ್ಲಿ ತಂಗಿ ಡಮಸ್ಕಸಿನ ಕಡೆಗೆ ಸೈನ್ಯಗಳನ್ನು ರವಾನೆ ಮಾಡುತ್ತಿರುವುದರ ಬಗ್ಗೆ ಹಝ್ರತ್ ಅಬೂಉಬೈದ(ರ) ಹಝ್ರತ್ ಉಮರ್(ರ)ರಿಗೆ ಪತ್ರ ಬರೆದರು. ಆಗ ಹಝ್ರತ್ ಉಮರ್(ರ) ಹೇಳಿದರು: 'ಡಮಸ್ಕಸ್ ಸಿರಿಯದ ಕೋಟೆ ಮತ್ತು ರಾಜಧಾನಿಯಾಗಿದೆ. ಮೊದಲು ಅದರ ಮೇಲೆ ವಿಜಯ ಸಾಧಿಸು, ಅದರೊಂದಿಗೆ ಫಹಲಿಗೂ ಸವಾರಿ ಸೈನಿಕರ ಸಂಘವನ್ನು ಕಳುಹಿಸು.' ಮುಸ್ಲಿಮರು ಬರುತ್ತಿರುವುದನ್ನು ನೋಡಿದ ರೋಮನ್ ಸೈನಿಕರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರನ್ನು ಹರಿಯಲು ಬಿಟ್ಟರು. ಇದರಿಂದ ಎಲ್ಲ ರಸ್ತೆಗಳು ಬಂದಾದುವು. ಹರ್ಖಲಿನ ಸಹಾಯಕ ಸೈನ್ಯಕ್ಕೆ ಕೂಡ ಡಮಸ್ಕಸಿಗೆ ಬರಲು ಸಾಧ್ಯವಾಗಲಿಲ್ಲ. ಇನ್ನೊಂದೆಡೆ ಮುಸ್ಲಿಮರು ಈ ಅವಸ್ಥೆಯಲ್ಲೂ ಸ್ಥಿರತೆಯಿಂದ ಇದ್ದರು. ಅದನ್ನು ನೋಡಿ ಕ್ರೈಸ್ತರು ಸಂಧಾನಕ್ಕೆ ತಯಾರಾದರು. ಆದಾಗ್ಯೂ ರೋಮನ್ನರ ಹಠ ಮತ್ತು ಅಹಂಕಾರದ ಕಾರಣದಿಂದ ಹಝ್ರತ್ ಮುಆಧ್ ಬಿನ್ ಜಬಲ್(ರ)ರ ರಾಯಭಾರ ಮತ್ತು ಹಝ್ರತ್ ಅಬೂಉಬೈದರೊಡನೆ ನೇರವಾಗಿ ನಡೆದ ಮಾತುಕತೆ ಎರಡೂ ವಿಫಲಗೊಂಡುವು ಮತ್ತು ಯುದ್ಧವನ್ನು ತಡೆಯಲಾಗಲಿಲ್ಲ. ರೋಮನ್ ಸೈನಿಕರ ಸಂಖ್ಯೆ 50 ಸಾವಿರದಿಂದ ಒಂದು ಲಕ್ಷದಷ್ಟು ಇತ್ತು ಎಂದು ಚರಿತ್ರೆಯಲ್ಲಿ ಹೇಳಲಾಗಿದೆ. ಯುದ್ಧ ಶುರುವಾದಾಗ ಮುಸ್ಲಿಮರ ಸ್ಥೈರ್ಯವನ್ನು ಕಂಡು ರೋಮನ್ ಸೇನಾಧಿಪತಿ ಮರಳಿ ಹೋಗಲು ಬಯಸಿದರು. ಆದರೆ ಖಾಲಿದ್(ರ)ರ ಯುದ್ಧ ಗರ್ಜನೆಯ ಕಾರಣದಿಂದ ಮುಸ್ಲಿಮರು ಎಂತಹ ದಾಳಿ ನಡೆಸಿದರು ಎಂದರೆ, ರೋಮನ್ನರು ಅಲ್ಲೇ ಸೋತು ಹೋದರು. ಕ್ರೈಸ್ತರ ಸಹಾಯ ಲಭಿಸುವ ಪ್ರತೀಕ್ಷೆಯಿಂದ ರೋಮನ್ನರು ಯುದ್ಧವನ್ನು ಮುಂದೂಡುತ್ತಿದ್ದರು. ಆದರೆ ಹಝ್ರತ್ ಖಾಲಿದ್(ರ)ರ ಸಲಹೆ ಪ್ರಕಾರ ಹಝ್ರತ್ ಅಬೂಉಬೈದ(ರ) ಮರುದಿನ ಯುದ್ಧವನ್ನು ಮುಂದುವರೆಸಿದರು. ಹೀಗೆ ಮರುದಿನ ಒಂದು ಗಂಟೆಯ ಘೋರ ಯುದ್ಧ ನಡೆಯಿತು. ಅನಂತರ ರೋಮನ್ನರು ಪರಾಜಿತಗೊಂಡು ಪರಾರಿಯಾಗಲು ತಯಾರಾದರು.

ಹಝ್ರತ್ ಉಮರ್(ರ)ರ ಆದೇಶ ಪ್ರಕಾರ ಪ್ರಾದೇಶಿಕ ಜನರ ಜೀವ, ಸಂಪತ್ತು, ಭೂಸ್ವತ್ತು, ಮನೆಗಳು ಮತ್ತು ಆರಾಧನಾ ಮಂದಿರಗಳು ಅವರ ಬಳಿಯಲ್ಲೇ ಇರಿಸಲಾದುವು. ಮುಸ್ಲಿಮರು ಕೇವಲ ಮಸೀದಿಗಳಿಗಾಗಿ ಜಾಗವನ್ನು ಪಡೆದರು.

**ಬೈಸಾನ್ ಮತ್ತು ತಬರಿಯ ವಿಜಯ:** ಜೋರ್ದನಿನ ಪ್ರದೇಶಗಳಲ್ಲಿ ರೋಮನ್ನರ ಸೋಲಿನ ಸುದ್ದಿ ಹರಡಿತ್ತು. ಆದ್ದರಿಂದ ಶರಹ್‌ಬೀಲ್ ಮತ್ತು ಅವರ ಸಂಗಡಿಗರು ಬೈಸಾನಿನ ಕಡೆಗೆ ಬರುತ್ತಿರುವುದಾಗಿ ಜನರಿಗೆ ಗೊತ್ತಾದಾಗ ಅವರು ಕೋಟೆಯನ್ನು ಮುಚ್ಚಿದರು. ಕೆಲವು ದಿನಗಳ ಮುತ್ತಿಗೆ ಮತ್ತು ಸಾಮಾನ್ಯ ಹೋರಾಟದ ನಂತರ ಬೈಸಾನಿನ ಜನರೊಡನೆ ಸಂಧಾನ ನಡೆಯಿತು. ಅದೇ ರೀತಿಯಲ್ಲಿ ತಬರಿಯದ ಜನರು ಸಹ ಸಂಧಾನ ಮಾಡಲು ಮುಂದಾದರು. ಅದನ್ನು ಅಂಗೀಕರಿಸಲಾಯಿತು.

**ಹಿಜರಿ 14ರ ಹಮಸ್ ವಿಜಯ:** ಹಝ್ರತ್ ಅಬೂಉಬೈದ(ರ) ಮತ್ತು ಹಝ್ರತ್ ಖಾಲಿದ್ ಬಿನ್ ವಲೀದ್ ಹಮಸನ್ನು ಸುತ್ತುವರೆದಾಗ ಅವು ತೀವ್ರ ಚಳಿಯ ದಿನಗಳಾಗಿದ್ದುವು. ಮುಸ್ಲಿಂ

ಸೈನಿಕರ ಬಳಿ ಚಳಿಯಿಂದ ರಕ್ಷಣೆ ಪಡೆಯಲು ಏನೂ ಇರಲಿಲ್ಲ. ಆದ್ದರಿಂದ ಮುಸ್ಲಿಮರು ಹೆಚ್ಚು ಸಮಯ ತೆರೆದ ಮೈದಾನದಲ್ಲಿ ಯುದ್ಧ ಮಾಡಲಾರರು ಎಂದು ರೋಮನ್ನರಿಗೆ ಭರವಸೆಯಿತ್ತು. ಹಮಸಿನ ಜನರ ಸಹಾಯಕ್ಕಾಗಿ ಹರ್ಖಲ್ ಒಂದು ಸೈನ್ಯವನ್ನು ಕಳುಹಿಸಿದನು. ಆದರೆ ಇರಾಕಿನಲ್ಲಿ ಸೇನಾಧಿಪತಿಯಾಗಿದ್ದ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಆ ಸೈನ್ಯವನ್ನು ಅಲ್ಲೇ ತಡೆದರು. ಹಮಸಿನ ಜನರನ್ನು ಸಹಾಯ ಮಾಡುವುದಾಗಿ ವಾಗ್ದಾನ ಮಾಡಿ ಹರ್ಖಲ್ ರುಹಾಗೆ ಹೋದನು. ಹಮಸಿನ ಜನರು ಮುಸ್ಲಿಮರ ಸ್ಥಿರತೆಯನ್ನು ನೋಡಿ ಸಂಧಾನಕ್ಕೆ ಮುಂದಾದರು. ಹೀಗೆ ಕಂದಾಯ ಮತ್ತು ಜಿಝ್ಯಯದ ನಿಬಂಧನೆಯೊಂದಿಗೆ ಸಂಧಾನವಾಯಿತು.

ಮರ್ಜುರ್ರೂಮಿನ ಘಟನೆ ಅದೇ ವರ್ಷ ನಡೆಯಿತು. ಧುಲ್‌ಕಿಲಾಅ್ ಎಂಬ ಸ್ಥಳದಲ್ಲಿ ಹಝ್ರತ್ ಅಬೂಉಬೈದ ಮತ್ತು ಹಝ್ರತ್ ಖಾಲಿದ್ ತಂಗಿರುವುದಾಗಿ ಹರ್ಖಲಿಗೆ ಮಾಹಿತಿ ಲಭಿಸಿದಾಗ ಅವನು ತೂಝುರನನ್ನು ಹೋರಾಟಕ್ಕಾಗಿ ಕಳುಹಿಸಿದನು. ಅವನು ಮರ್ಜುರ್ರೂಮಿಗೆ ತಲುಪಿದಾಗ ಶನಸ್ ರೂಮಿ ಸಹ ಅಲ್ಲಿಗೆ ಬಂದನು. ಒಂದು ರಾತ್ರಿ ತೂಝುರ ತನ್ನ ಜಾಗವನ್ನು ಖಾಲಿ ಮಾಡಿ ಅಲ್ಲಿಗೆ ರವಾನೆಯಾದಾಗ ಹಝ್ರತ್ ಖಾಲಿದ್(ರ) ಅವನನ್ನು ಹಿಂಬಾಲಿಸಿದರು. ಇನ್ನೊಂದೆಡೆ ಯಝೀದ್ ಬಿನ್ ಅಬೂಸುಫ್ಯಾನಿಗೆ ತೂಝುರನ ಕಾರ್ಯಚರಣೆಯ ಬಗ್ಗೆ ಮಾಹಿತಿ ಲಭಿಸಿದಾಗ ಅವರು ಮುಂದಿನಿಂದ ಅವನನ್ನು ತಡೆದರು. ಹೀಗೆ ಎರಡೂ ಕಡೆಗಳಿಂದ ಮುಸ್ಲಿಮರು ತೂಝುರನ ಸೈನ್ಯವನ್ನು ಸುತ್ತುವರಿದು ಅವರನ್ನು ಸೋಲಿಸಿದರು. ಅತ್ತ ಮರ್ಜುರ್ರೂಮ್‌ನಲ್ಲಿ ಅಬೂಉಬೈದ(ರ) ಶನಸ್‌ನ ವಿರುದ್ಧ ಹೋರಾಡಿ ವಿಜಯ ಸಾಧಿಸಿದರು.

ಅನಂತರ ಹಝ್ರತ್ ಅಬೂಉಬೈದ(ರ) ಹಮ್ಮಾದ್, ಶೈಝುರ್ ಮತ್ತು ಸಲ್ಮಿಯದಲ್ಲಿ ವಿಜಯ ಸಾಧಿಸಿದರು. ಅನಂತರ ಸಿರಿಯದ ತೀರ ಪ್ರದೇಶದ ಪಟ್ಟಣವಾದ ಲಾಧ್‌ಖಿಯದ ಕಡೆಗೆ ಹೋದರು.

ಲಾಧ್‌ಖಿಯ ವಿಜಯ ಹಿಜರಿ 14ರಲ್ಲಿ ಉಂಟಾಯಿತು. ಯುದ್ಧತಂತ್ರ ಪ್ರಕಾರ ಹಝ್ರತ್ ಅಬೂಉಬೈದ(ರ) ಗುಹೆರೂಪದ ಹೊಂಡಗಳನ್ನು ಮಾಡಿದರು. ಬೆಳಿಗ್ಗೆಯಾಗುತ್ತಲೇ ಮುತ್ತಿಗೆಯನ್ನು ಕೊನೆಗೊಳಿಸಿದರು. ಮುತ್ತಿಗೆ ಮುಕ್ತಾಯಗೊಂಡಿರುವುದಾಗಿ ಕಂಡು ಪಟ್ಟಣವಾಸಿಗಳು ಬಾಗಿಲುಗಳನ್ನು ತೆರೆದರು. ಹಝ್ರತ್ ಅಬೂಉಬೈದ(ರ) ರಾತ್ರೋರಾತ್ರಿ ತನ್ನ ಸೈನ್ಯ ಸಮೇತ ಮರಳಿ ಬಂದರು. ಆ ಹೊಂಡಗಳಲ್ಲಿ ಸೈನಿಕರು ಅಡಗಿ ಕುಳಿತರು. ಬೆಳಿಗ್ಗೆ ಪಟ್ಟಣವಾಸಿಗಳು ಬಾಗಿಲುಗಳನ್ನು ತೆರೆದಾಗ ಮುಸ್ಲಿಮರು ದಾಳಿ ನಡೆಸಿದರು. ಹೀಗೆ ಪಟ್ಟಣದ ಮೇಲೆ ವಿಜಯ ಸಾಧಿಸಲಾಯಿತು.

**ಹಿಜರೀ 15ರ ಖಿನ್‌ಸರೀನ್ ವಿಜಯ:** ಹಝ್ರತ್ ಅಬೂಉಬೈದ(ರ) ಹಝ್ರತ್ ಖಾಲಿದ್(ರ)ರನ್ನು ಖಿನ್‌ಸರೀನ್‌ಗೆ ರವಾನೆ ಮಾಡಿದರು. ಮಾರ್ಗಮಧ್ಯೆ ಹಾಝಿರ್ ಎಂಬ ಸ್ಥಳದಲ್ಲಿ ರೋಮನರು ಮೀನಾಸಿನ ನೇತೃತ್ವದಲ್ಲಿ ಹೋರಾಟ ನಡೆಸಿ ಪರಾಜಯಗೊಂಡರು. ಅವರನ್ನು ಒತ್ತಾಯಪೂರ್ವಕವಾಗಿ ಈ ಯುದ್ಧದಲ್ಲಿ ಸೇರಿಸಲಾಗಿತ್ತು ಆದ್ದರಿಂದ ಅವರನ್ನು ಬಿಟ್ಟುಬಿಡಲು ಪ್ರದೇಶ ನಿವಾಸಿಗಳು ಬೇಡಿಕೊಂಡರು. ಖಾಲಿದ್ ಅವರ ಬೇಡಿಕೆಯನ್ನು ಅಂಗೀಕರಿಸಿದರು. ಆದರೆ ಕೆಲವು ರೋಮನ್ನರು ಅಲ್ಲಿಂದ ಪರಾರಿಯಾಗಿ ಖಿನ್‌ಸರೀನ್‌ನಲ್ಲಿ ಅಭಯ ಪಡೆದರು. ಅಲ್ಲೂ ಬಚಾವು ಆಗುವ ಮಾರ್ಗ ಕಾಣದೆ ಕೆಲವು ದಿನಗಳ ನಂತರ ಸಂಧಾನಕ್ಕೆ ಮುಂದಾದರು. ಆದರೆ ಅವರಿಗೆ ಆಜ್ಞಾಲಂಘನೆಯ ಶಿಕ್ಷೆಯನ್ನು ನೀಡಲು ಹಝ್ರತ್ ಖಾಲಿದ್(ರ) ತೀರ್ಮಾನಿಸಿದರು. ಖಿನ್‌ಸರೀನಿನ ನಿವಾಸಿಗಳು ಸಂಪತ್ತು, ಆಸ್ತಿ, ಕುಟುಂಬವನ್ನು ಉಪೇಕ್ಷಿಸಿ ಅಂತಾಕಿಯಗೆ ಓಡಿಹೋದರು. ಹಝ್ರತ್ ಅಬೂಉಬೈದ(ರ) ಅಲ್ಲಿಗೆ ತಲುಪಿದಾಗ ಹಝ್ರತ್ ಖಾಲಿದ್(ರ)ರ ತೀರ್ಮಾನವು ನ್ಯಾಯಯುತವಾಗಿತ್ತು ಎಂದು ಹೇಳಿದರು. ಆದರೂ ದಯೆಯಿಂದ ವರ್ತಿಸುತ್ತಾ ಪಟ್ಟಣ ನಿವಾಸಿಗಳಿಗೆ ಅಭಯ ನೀಡಿದರು. ಆಗ ಅಂತಾಕಿಯಗೆ ಪರಾರಿಯಾದ ಜನರು ಕೂಡ ಜಿಝ್ಯಯ ಪಾವತಿ ಮಾಡುವುದಾಗಿ ಹೇಳಿ ಮರಳಿ ಬಂದರು.

ಖಿಸಾರಿಯ ವಿಜಯ ಹಿಜರೀ 15ರಲ್ಲಿ ನಡೆಯಿತು. ಹಿಜರೀ 13ರಲ್ಲಿ ಅಮ್ರ್ ಬಿನ್ ಆಸ್(ರ) ಖಿಸಾರಿಯದ ಮೇಲೆ ದಾಳಿ ನಡೆಸಿದರು ಎಂದು ಅಲ್‌ಫಾರೂಖಿನಲ್ಲಿ ಬರೆಯಲಾಗಿದೆ. ಹಝ್ರತ್ ಅಬೂಉಬೈದ(ರ)ರ ಮರಣದ ನಂತರ ಹಝ್ರತ್ ಉಮರ್(ರ) ಯಝೀದ್ ಬಿನ್ ಅಬೂಸುಫ್ಯಾನ್‌ರೊಡನೆ ಆಕ್ರಮಣ ನಡೆಸಲು ಆಜ್ಞಾಪಿಸಿದರು. ಅವರು 17 ಸಾವಿರ ಸೈನಿಕರೊಂದಿಗೆ ಮುತ್ತಿಗೆ ನಡೆಸಿದರು. ಆದರೆ ಹಿಜರಿ 18ರಲ್ಲಿ ತನ್ನ ರೋಗದ ಕಾರಣದಿಂದ ಸಹೋದರನಾದ ಅಮೀರ್ ಮುಆವಿಯನನ್ನು ಪ್ರತಿನಿಧಿಯನ್ನಾಗಿ ಮಾಡಿಕೊಂಡು ಡಮಸ್ಕಸಿಗೆ ಹೋದರು. ಅಲ್ಲಿ ಅವರು ನಿಧನರಾದರು. ಹಝ್ರತ್ ಅಮೀರ್ ಮುಆವಿಯ(ರ) ಮುತ್ತಿಗೆಯನ್ನು ಮುಂದುವರೆಸಿದರು. ಅದೇ ಯುದ್ಧದ ವೇಳೆ ಒಂದು ದಿನ ಬದರೀ ಸಹಾಬಿಯಾದ ಹಝ್ರತ್ ಉಬಾದ ಬಿನ್ ಸಾಮಿತ್(ರ) ಮುಸ್ಲಿಮರನ್ನು ಸಂಬೋಧಿಸಿ ಭಾಷಣ ಮಾಡುತ್ತಾ ಹೇಳಿದರು: ಎಲೈ ಮುಸ್ಲಿಮರೇ, ಹಲ್ಲೆ ನಡೆಸಿ ರೋಮನ್ನರನ್ನು ತೊಲಗಿಸಲು ನಿಮ್ಮಿಂದ ಸಾಧ್ಯವಾಗದಿರಲು ಕಾರಣವೇನೆಂದರೆ, ನಿಮ್ಮಲ್ಲಿ ಯಾರೋ ಮೋಸಗಾರನಿದ್ದಾನೆ ಅಥವಾ ಪ್ರಾಮಾಣಿಕನಲ್ಲದವನು ಇದ್ದಾನೆ. ಸತ್ಯಹೃದಯದೊಂದಿಗೆ ಶಹಾದತ್ ಕಲಿಮ ಹೇಳಲು ಅವರು ಎಲ್ಲರೊಡನೆ ಹೇಳಿದರು. ಕೊನೆಗೆ ಒಂದು ದಿನ ರೋಮನ್ನರು ಹೋರಾಟಕ್ಕಾಗಿ ಹೊರಟರು ಮತ್ತು ಸೋಲನ್ನು ಅನುಭವಿಸಿದರು. ಹೀಗೆ ಅಂದು 80 ಸಾವಿರದಿಂದ ಒಂದು ಲಕ್ಷದಷ್ಟು ರೋಮನ್ ಸಿಪಾಯಿಗಳು ಕೊಲ್ಲಲ್ಪಟ್ಟರು.

(ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದ ಪ್ರಸ್ತಾಪ ಮುಂದುವರೆಯುವುದು ಎಂದು ತಿಳಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್‌ರು ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ್ಹಾಯಿಬ್ ನಿರ್ವಹಿಸುವುದಾಗಿ ಹೇಳಿದರು:)

1. ಕೇರಳದ ಮುಬಲ್ಲಿಗ್‌ರಾಗಿದ್ದ ಸನ್ಮಾನ್ಯ ಮೌಲವಿ ಕೆ. ಮುಹಮ್ಮದ್ ಅಲವಿ ಸಾಹಿಬ್‌ರ ಪತ್ನಿ ಖದೀಜ ಸಾಹಿಬರು ಇತ್ತೀಚೆಗೆ ತನ್ನ 80ನೇ ವಯಸ್ಸಿನಲ್ಲಿ ನಿಧನರಾದರು – **ಇನ್ನಾ ಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್**. ಅವರ ತಂದೆಯಾದ ಕುಂಞಿ ಮುಹ್‌ಯುದ್ದೀನ್ ಸಾಹಿಬ್‌ರು ಕೇರಳದ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ದಿವಂಗತರಿಗೆ ಬಹಳ ಕಿರಿಯ ವಯಸ್ಸಿನಲ್ಲೇ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಲಭಿಸಿತ್ತು. ಬಹಳ ಸಹನೆಯುಳ್ಳ, ಕೃತಜ್ಞತೆಯುಳ್ಳ, ಉಪವಾಸ ಮತ್ತು

ನಮಾಝಿನ ಪಾಲನೆ ಮಾಡುವ, ಧರ್ಮಿಷ್ಠೆಯಾದ, ಬಡವರನ್ನು ಸಹಾಯ ಮಾಡುವ, ಅತಿಥಿ ಸತ್ಕಾರ ಮಾಡುವ ಮತ್ತು ಇದ್ದುದರಲ್ಲಿ ತೃಪ್ತಿಪಡುವ ಮಹಿಳೆಯಾಗಿದ್ದರು. ದಿವಂಗತರ ಪತಿ ಮುಬಲ್ಲಿಗ್ ಆಗಿದ್ದರು. ಅನೇಕ ದಿನಗಳು ಪರ್ಯಟಣೆಗಳ ಕಾರಣ ಹೊರಗೆ ಇರುತ್ತಿದ್ದರು. ಆದರೆ ದಿವಂಗತರು ಯಾವಾಗಲೂ ಕೃತಜ್ಞತೆಯಿಂದ ಇದ್ದರು. ಯಾವುದೇ ದೂರು ಇರಲಿಲ್ಲ. ದಿವಂಗತರು ಒಬ್ಬರು ಪುತ್ರ ಮತ್ತು ಐವರು ಪುತ್ರಿಯರನ್ನು ಅಗಲಿರುವರು. ದಿವಂಗತರು ವಸಿಯ್ಯತ್ ಸಹ ಮಾಡಿದ್ದರು. ಮುಬಲ್ಲಿಗ್ ಆಗಿದ್ದ ಅವರ ಹಿರಿಯ ಪುತ್ರ ಕೆ. ಮಹ್ಮೂದ್ ಅಹ್ಮದ್ ಸಾಹಿಬ್‌ರು 54ನೇ ವಯಸ್ಸಿನಲ್ಲಿ ಕಿಡ್ನಿ ವೈಫಲ್ಯದ ಕಾರಣ ನಿಧನರಾಗಿದ್ದರು. ಅವರ ಕಿರಿಯ ಮಗನೂ ಮುಅಲ್ಲಿಂ ಆಗಿರುವರು ಹಾಗೂ ಐವರು ಪುತ್ರಿಯರು ಸಹ ಮುಬಲ್ಲಿಗರಿಗೆ ವಿವಾಹಗೊಂಡಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್‌ನಿಂದ ವರ್ತಿಸಲಿ.

ಎರಡನೆಯದಾಗಿ ಅಟಕ್ ಜಿಲ್ಲೆಯ ಮಾಜಿ ಜಿಲ್ಲಾ ಅಮೀರ್ ಆದ ಸನ್ಮಾನ್ಯ ಮಲಿಕ್ ಸುಲ್ತಾನ್ ರಶೀದ್ ಸಾಹಿಬ್ ಆಫ್ ಕೋಟ್‌ಫತಹ್‌ಖ಼ಾನ್ ಅವರದ್ದಾಗಿದೆ. ಆಗಸ್ಟ್ 22ರ ರಾತ್ರಿ ನಿಧನರಾದರು – **ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್**. ದಿವಂಗತರು ಖ಼ಿಲಾಫತಿನ ನಿಷ್ಠಾವಂತ, ತಬ್ಲೀಗ್ ಮಾಡಲು ಆಸಕ್ತಿ ಇರುವ, ಆರಾಧನೆ ಮಾಡುವ, ದುಆ ಮಾಡುವ, ವಿನಯವಂತರಾದ, ಅಲ್ಲಾಹನ ಮೇಲೆ ಭರವಸೆ ಹೊಂದಿದ, ಬಡವರ ಹಾಗೂ ನಿರ್ಗತಿಕರ ಸಹಾಯ ಮಾಡುವ ಮತ್ತು ಬಹಳ ವಿವೇಕಯುತವಾಗಿ ಮಾತನಾಡುವ ವ್ಯಕ್ತಿಯಾಗಿದ್ದರು.

ಮೂರನೆಯದಾಗಿ ಇಂಡೋನೇಶಿಯದ ಅಬ್ದುಲ್‌ಖಯ್ಯೂಮ್ ಸಾಹಿಬ್‌ರದ್ದಾಗಿದೆ. ಆಗಸ್ಟ್ 25ರಂದು 82ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್**. ದಿವಂಗತರು ಭಾರತ ಮತ್ತು ಪಾಕಿಸ್ತಾನದವರಲ್ಲದ ಮೊದಲ ಮುಬಲ್ಲಿಗ್ ಆದ ಮೌಲಾನ ಅಬ್ದುಲ್ ವಾಹಿದ್ ಸಾಹಿಬ್ ಸಮಾಟರಿಯ ಮಗನಾಗಿದ್ದರು. ದಿವಂಗತರು ತನ್ನ ದೇಶಕ್ಕಾಗಿ ಶ್ರೇಷ್ಠ ಸೇವೆಗಳನ್ನು ಮಾಡಿದ್ದರು. ದಿವಂಗತರು ಮುರಬ್ಬಿಗಳನ್ನು ಮತ್ತು ವಖ್ಫೇ ಝಿಂದಗಿಯರನ್ನು ಬಹಳ ಗೌರವಿಸುತ್ತಿದ್ದರು. ತನ್ನ ಅಧೀನದಲ್ಲಿ ಕೆಲಸ ಮಾಡುವವರೊಡನೆ ಉತ್ತಮವಾಗಿ ವರ್ತಿಸುತ್ತಿದ್ದರು. ಅವರಲ್ಲಿ ಕರುಣೆ ಮತ್ತು ಉದಾರತೆ ಬಹಳ ಉನ್ನತ ಮಟ್ಟದಲ್ಲಿ ಇದ್ದುವು. ದಿವಂಗತರು ಖ಼ಿಲಾಫತಿನೊಂದಿಗೆ ಆಳವಾದ ಸಂಬಂಧಹೊಂದಿದ್ದ, ವಿನಯ ಮತ್ತು ಧನತ್ಯಾಗದಲ್ಲಿ ಮುಂದಿದ್ದ ಅತ್ಯಂತ ಪ್ರಾಮಾಣಿಕ ಹಿರಿಯ ವ್ಯಕ್ತಿಯಾಗಿದ್ದರು.

ನಾಲ್ಕನೆಯದಾಗಿ ಬೆನಿನ್‌ನ ದಾವೂದ ರಝ಼ಾಕಿ ಯೂನುಸ್ ಸಾಹಿಬ್‌ರದ್ದಾಗಿದೆ. ಆಗಸ್ಟ್ 27ರಂದು 74ನೇ ವಯಸ್ಸಿನಲ್ಲಿ ನಿಧನರಾದರು – **ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್**. ದಿವಂಗತರು ಬೆನಿನ್‌ನ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಅವರು ವಿದ್ಯಾವಂತ ಅಹ್ಮದಿಯಾಗಿದ್ದರು, ವಿದ್ಯುತ್ ಮತ್ತು ಜಲ ವಿಭಾಗದ ಡೈರಕ್ಟರ್ ಹುದ್ದೆಯಿಂದ ನಿವೃತ್ತರಾಗಿದ್ದರು. ಅತ್ಯಂತ ಆದರಣೀಯ, ಸಭ್ಯ, ನಮಾಝ್ ಪಾಲನೆ ಮಾಡುವ, ತಹಜ್ಜುದ್ ನಿರ್ವಹಿಸುವ, ಒಳ್ಳೆಯ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಆದರಣೀಯರಾದ ಖ಼ಲೀಫರೊಂದಿಗೆ ಅಪರಿಮಿತವಾದ ಪ್ರೀತಿಯಿತ್ತು. ದಿನಪೂರ್ತಿ ಜನಸೇವೆಯಲ್ಲಿ ನಿರತರಾಗುತ್ತಿದ್ದರು.

(ಹಝ್ರತ್ ಖ಼ಲೀಫತುಲ್ ಮಸೀಹರು ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 10-09-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian


***Email***: *khutuba.kannada@gmail.com*


**You can find all the Sermons archived at**: www.alislam.org/friday-sermon